ಆನೇಕಲ್ ನಗರಕ್ಕೆ ಕುಡಿಯುವ ನೀರಿನ ಯೋಜನೆ.

848(1229) ಶ್ರೀ ಎ.ನಾರಾಯಣ ಸ್ವಾಮಿ (ಆನೇಕಲ್) :— ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

1. ಆನೇಕಲ್ ನಗರಕ್ಕೆ ಕುಡಿಯುವ ನೀರಿನ ಯೋಜನೆಯನ್ನು ಅನುಷ್ಠಾನಗೊಳಿಸಲು ಈ ಹಿಂದಿನ ಅಧಿವೇಶನದಲ್ಲಿ ಭರವಸೆ ಕೊಟ್ಟಿದ್ದು ನಿಜವೇ?

2. ಹಾಗಿದ್ದಲ್ಲಿ ಸದರಿ ಯೋಜನೆಯನ್ನು ಈವರೆಗೆ ಅನುಷ್ಠಾನಗೊಳಿಸದಿರುವುದಕ್ಕೆ ಕಾರಣಗಳೇನು?

3. ಈ ನಗರದಲ್ಲಿ ಬೇಸಿಗೆಯ ಕಾಲದಲ್ಲಿ ಕುಡಿಯುವ ನೀರಿನ ತೀವ್ರ ಅಭಾವ ಉಂಟಾಗುವುದರಿಂದ ಈ ಯೋಜನೆಯನ್ನು ಕೈಗೊಳ್ಳಲಾಗುವುದೇ?

4. ಹಾಗಿದ್ದಲ್ಲಿ ಯಾವಾಗ?

ಶ್ರೀ ಎಂ.ಎಸ್. ಪಾಟೀಲ್ (ನಗರಾಭಿವೃದ್ಧಿ ಸಚಿವರು) :—

1. ಹೌದು

2. ಮುತ್ಯಾಲಮಡುವನ್ನು ಮೂಲವಾಗಿ ಇಟ್ಟುಕೊಂಡು ತಯಾರಿಸಲಾಗಿದ್ದ ರೂ. 500.00 ಲಕ್ಷ ಮೊತ್ತದ ಯೋಜನೆಯು ಕಾರ್ಯ ಸಾಧ್ಯವಲ್ಲವೆಂಬ ಕಾರಣ ಕೊಳವೆ ಬಾವಿಗಳನ್ನು ಮೂಲವಾಗಿಟ್ಟುಕೊಂಡು ರೂ. 417 ಲಕ್ಷಗಳ ಅಂದಾಜನ್ನು ಮಂಡಲಿಯು ತಯಾರಿಸಲಾಗಿದೆ. ಈ ರೀತಿ ನೀರಿನ ಮೂಲವನ್ನು ಇತ್ಯರ್ಥಗೊಳಿಸುವಲ್ಲಿ ವಿಳಂಬವಾಗಿದೆ.

3. ಕೈಗೊಳ್ಳಲಾಗುವುದು.

4. ಸರ್ಕಾರದ ಪರಿಶೀಲನೆಯಲ್ಲಿದ್ದು ಮಂಜೂರಾತಿ ದೊರೆತ ಕೂಡಲೇ ಈ ಯೋಜನೆಯನ್ನು ಕಾರ್ಯಗತಗೊಳಿಸಲು ಕ್ರಮ ಕೈಗೊಳ್ಳಲಾಗುವುದು.

ರಾಜ್ಯದಲ್ಲಿ ಚೇತನ ಯೋಜನೆ.

849 (1365) ಶ್ರೀ ಎ. ನಾರಾಯಣಸ್ವಾಮಿ (ಆನೇಕಲ್) :— ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ರಾಜ್ಯದಲ್ಲಿ ನವಚೇತನ ಯೋಜನೆ ಅಡಿಯಲ್ಲಿ ಗಣಕಯಂತ್ರ (ಕಂಪ್ಯೂಟರ್) ತರಬೇತಿ ನೀಡುತ್ತಿರುವ ಕೇಂದ್ರಗಳು ಯಾವುವು?

ಆ) ಈ ಕೇಂದ್ರಗಳಲ್ಲಿ ತರಬೇತಿ ಪಡೆಯುತ್ತಿರುವ ವಿದ್ಯಾರ್ಥಿಗಳ ಸಂಖ್ಯೆ ಎಷ್ಟು?

ಇ) ಸದರಿ ತರಬೇತಿ ಕೇಂದ್ರಗಳಿಗೆ ಇದುವರೆವಿಗೂ ಬಿಡುಗಡೆಯಾದ ಹಣವೆಷ್ಟು? (ಕೇಂದ್ರವಾರು ವಿವರ ಒದಗಿಸುವುದು)

ಈ) ಸದರಿ ತರಬೇತಿ ಕೇಂದ್ರಗಳಿಗೆ ಮುಂಗಡ ಹಣ ನೀಡಲಾಗುತ್ತಿದೆಯೇ;

ಇ) ಅಸ್ತಿತ್ವದಲ್ಲಿ ಇರದೇ ಇರುವ ಕಂಪ್ಯೂಟರ್ ತರಬೇತಿ ಕೇಂದ್ರಗಳಿಗೆ ಹಣ ಬಿಡುಗಡೆ ಮಾಡಿರುವುದು ಸರ್ಕಾರದಗಮನಕ್ಕೆ ಬಂದಿದೆಯೇ?

ಈ) ಆಗಿದ್ದಲ್ಲಿ ಇಂಥ ಕೇಂದ್ರಗಳ ವಿರುದ್ಧ ಸರ್ಕಾರ ತೆಗೆದುಕೊಂಡ ಕ್ರಮಗಳೇನು?

ಶ್ರೀ ಕೆ.ಎಂ. ಕೃಷ್ಣರೆಡ್ಡಿ (ಸಮಾಜ ಕಲ್ಯಾಣ ಸಚಿವರು) :—

ಅ) 1 ಕಿಯೋನಿಕ್ಸ್, ಬೆಂಗಳೂರು
2 ಕಂಪ್ಯೂಟರ್ ಪಾಯಿಂಟ್ ಜಯನಗರ, ಬೆಂಗಳೂರು
3 ಜಿ.ಜಿ.ಎಸ್.ಎಸ್. ಇನ್‌ಫೋಟೇಕ್, ಜಯನಗರ, ಬೆಂಗಳೂರು-40
4) ಸಿಗ್ಮಾ ಟೆಕ್ನಾಲಜಿ ಆಫ್ ಕಂಪ್ಯೂಟರ್, ರಾಜಾಜಿನಗರ ಬೆಂಗಳೂರು-10
5) ಗೌರವ್ ಇನ್‌ಸ್ಟಿಟ್ಯೂಟ್ ಆಫ್ ಕಂಪ್ಯೂಟರ್ಸ್ ಶಿವಮೊಗ್ಗ.
6) ಇನ್‌ಫೋ ಪಾಯಿಂಟ ಕಂಪ್ಯೂಟರ್, ಆರ್.ಟಿ.ನಗರ ಬೆಂಗಳೂರು-32
7) ಮಣಿಪಾಲ್ ಇನ್‌ಸ್ಟಿಟ್ಯೂಟ್ ಆಫ್ ಕಂಪ್ಯೂಟರ್ ಎಜುಕೇಷನ್ ಚಾಮರಾಜಪೇಟೆ, ಬೆಂಗಳೂರು-18
8) ಐ.ಎಸ್.ಸಿ.ಟಿ. (ಪ್ರೊಸಪ್ಟ್ ಸಿಸ್ಟಮ್ಸ್ ಪ್ರೈವೇಟ್ ಲಿಮಿಟೆಡ್, ಜಯನಗರ, ಬೆಂಗಳೂರು-11)
9) ಅನು ಕಂಪ್ಯೂಟರ್ಸ್, ಜಗಜೀವನರಾಂನಗರ, ಬೆಂಗಳೂರು.

ಆ) 2880

ಇ) ರೂ. 1,72,17,000 (ವಿವರಗಳನ್ನು ಅನುಬಂಧದಲ್ಲಿ ನೀಡಿದೆ)

ಈ) ಹೌದು

ಉ) ಅಸ್ತಿತ್ವದಲ್ಲಿ ಇರದೇ ಇರುವ ಯಾವುದೇ ಕಂಪ್ಯೂಟರ್ ತರಬೇತಿ ಕೇಂದ್ರಕ್ಕೆ ಹಣ ಬಿಡುಗಡೆ ಮಾಡಿರುವುದಿಲ್ಲ.

ಊ) ಪ್ರಶ್ನೆ ಉದ್ಭವಿಸುವುದಿಲ್ಲ.

ಬಾಗಲಕೋಟೆ ತಾಲ್ಲೂಕಿನಲ್ಲಿ ಬಿ.ಸಿ.ಎಂ. ಹಾಸ್ಟೆಲ್.

850(1224) ಶ್ರೀ ಪೂಜಾರಿ ಪ್ರಹ್ಲಾದ್ ಹನುಮಂತಪ್ಪ (ಬಾಗಲಕೋಟೆ) :— ಮಾನ್ಯ ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಬಾಗಲಕೋಟೆ ತಾಲ್ಲೂಕಿನ ಕುಂದಾಪುರ ಗ್ರಾಮದಲ್ಲಿ ಸರ್ಕಾರಿ ಮಾಧ್ಯಮಿಕ ಶಾಲೆ ಇರುವುದರಿಂದ ಅಲ್ಲಿ ಬಿ.ಸಿ.ಎಂ. ಹಾಸ್ಟೆಲಿನ ಅವಶ್ಯಕತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?